ರೈತರ ಸಾಲ ಮನ್ನಾ ಯೋಜನೆ ಬಗ್ಗೆ

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

24 (109) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬ್ಯಾಂಕ್ ಸಾಲದ ನೋಟಿಸಿನಿಂದ ರೈತರು ಹೆದರಿ ಆತ್ಮಹತ್ಯೆಗೆ ಒಳಗಾಗುವುದನ್ನು ನಿಲ್ಲಿಸಲು ಕೇರಳ ಸರ್ಕಾರದ ಮಾದರಿಯಂತೆ "ಖಾಯಂ ಪರಿಹಾರ ಆಯೋಗ" ವನ್ನು ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ ;

(ಆ) ರೈತರು ಸಾಲಕ್ಕಿಂತ ಬಡ್ಡಿಯನ್ನು ಹೆಚ್ಚಾಗಿ ಪಾವತಿಸಿ ಸಂಕಷ್ಟಕ್ಕೆ ಒಳಗಾದಾಗ ಬರದಿಂದ ಸಾಲ ಪಾವತಿ ಸಾಧ್ಯವಾಗದ ಸ್ಥಿತಿ ಎದುರಾದಾಗ ರೈತರು ಋಣ ಪರಿಹಾರ ಆಯೋಗವನ್ನು ಸಂಪರ್ಕಿಸಬಹುದೇ ;

(ಇ) ಈ ಆಯೋಗವನ್ನು ರಚಿಸಲು ಸರ್ಕಾರ ಮುಂದಾದಲ್ಲಿ ಇದನ್ನು ಯಾವಾಗ ಹಾಗೂ ಇದರಿಂದ ರೈತಾಪಿ ಜನಾಂಗಕ್ಕೆ ಒದಗಿಸುವ ಅನುಕೂಲತೆಗಳೇನು ? (ವಿವರವಾದ ಮಾಹಿತಿಯನ್ನು ನೀಡುವುದು)